ದನಿಯಲ್ಲಿ ಹೋರಾಟದ ಲಯವಿದೆ. ನಾಡು ನುಡಿಗೆ ಸಂಬಂಧಿಸಿದ ಎಲ್ಲ ಹೋರಾಟಗಳಲ್ಲೂ ಅವರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ವ್ಯವಸ್ಥೆಯ ವಿರುದ್ಧದ ತಮ್ಮ ದನಿಯನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ. ಹೋರಾಟದಲ್ಲಿ ಅವರು ಜೊತೆಗಿದ್ದರೆ ಸಹಜವಾಗಿಯೇ ಆ ಹೋರಾಟಕ್ಕೆ ನೈತಿಕತೆಯ ಬಲ ಒದಗಿ ಬರುತ್ತಿತ್ತು. ಅದಕ್ಕೆ ಕಾರಣವೂ ಇದೆ. ಕಣವಿಯವರು ತಮ್ಮ ಬದುಕಿನುದ್ದಕ್ಕೂ 'ಅಧಿಕಾರ ಕೇಂದ್ರ'ದಿಂದ ದೂರವಿದ್ದವರು.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ – ಪ್ರಕಟಣಾ ವಿಭಾಗದ ಕಾರ್ಯದರ್ಶಿಯಾಗಿ ವೃತ್ತಿಜೀವನವನ್ನು ಆರಂಭಿಸಿದ ಕಣವಿಯವರು, ಪ್ರಸಾರಾಂಗದ ನಿರ್ದೇಶಕರಾಗಿ ನಿವೃತ್ತರಾದರು. ಒಂದು ವರ್ಷ ಅವರು ಕನ್ನಡ ಅಧ್ಯಯನ ಪೀಠದಲ್ಲಿ ಗೌರವ ಸಂದರ್ಶನ ಪ್ರಾಧ್ಯಾಪಕರಾಗಿದ್ದುದನ್ನು ಬಿಟ್ಟರೆ, ವಿಶ್ವವಿದ್ಯಾಲಯದಲ್ಲಿದ್ದೂ ಪ್ರಾಧ್ಯಾಪಕ ವೃತ್ತಿ ಮಾಡಿದವರಲ್ಲ. ಹೀಗಾಗಿ, ಅನೇಕ ಪ್ರಾಧ್ಯಾಪಕರಂತೆ ಶಿಷ್ಯಬಳಗದ 'ಅಧಿಕಾರ ವಲಯ'ವನ್ನು ಅವರು ಸೃಷ್ಟಿಸಿಕೊಳ್ಳಲಿಲ್ಲ. ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದವಿ ಅವರನ್ನು ಅರಸಿ ಬಂದಾಗಲೂ ಅದನ್ನು ನಯವಾಗಿ ನಿರಾಕರಿಸಿದ್ದನ್ನು ನಾನು ಬಲ್ಲೆ. ಯಾವ ಬಗೆಯ ವ್ಯವಸ್ಥೆಯ ಅಧಿಕಾರದಿಂದಲೂ ಅವರು ಅಂತರವನ್ನು ಎಚ್ಚರದಿಂದ ಕಾಯ್ದುಕೊಳ್ಳುತ್ತಿದ್ದರು. ಆದರೆ, ನಾಡಿನ ಪ್ರಮುಖ ಸಾಂಸ್ಕೃತಿಕ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದು ನಿರುದ್ವಿಗ್ನವಾಗಿ ಅವುಗಳಲ್ಲಿ ಪಾಲ್ಗೊಂಡು ಮಾರ್ಗದರ್ಶನ ಮಾಡುತ್ತಿದ್ದರು.

'ಹೋಗಬೇಡ ಕವಿತೆ ನೀನು, ಬಾಗಬೇಡ ಯಾರಿಗೂ / ತೂಗಿ ನೋಡಿ ಬೆಲೆಯ ಕಟ್ಟು ಹೂವಿನಂತೆ ನಾರಿಗೂ / ನಿನ್ನ ರೂಪ ಲಾವಣ್ಯಕೆ ಬೀಗಬೇಡ ಎಂದಿಗೂ / ಬತ್ತದಿಹುದು ಚೆಲುವಿನೂಟೆ ನೆಲದ ಒಡಲೊಳೆಂದಿಗೂ / ಒಡೆದುಹೋದ ಮನಸುಗಳಲಿ ಹಗೆಯ ಕಿಡಿಯ ನಂದಿಸು / ಸಿಡಿದು ನಿಂತ ಹೃದಯಗಳನು ಪ್ರೀತಿಯಲ್ಲಿ ಬಂಧಿಸು / ದುಡಿವ ಕೈಗೆ ಶಕ್ತಿ ಬರಲಿ; ಮಳೆಯ ಸುರಿಸು ಧರಣಿಗೆ / ಹಳೆಯ ಕೊಳೆಯ ಕೊಚ್ಚಿ ತೊಳೆಯೆ ಹಚ್ಚಹಸಿರು ಹಾಡಿಗೆ / ಹಾಡಿಗೆದೆಯು ಮಿಡಿಯುವಾಗ ಬೇಡ ವಾದ್ಯದಬ್ಬರ / ಗಾಢ ಮೌನದಲ್ಲಿ ತಾನೆ ಮೂಡಿ ಬಹನು ಚಂದಿರ'.

ಇದು ಕಣವಿಯವರ ಕಾವ್ಯತತ್ವವೂ ಹೌದು; ಜೀವನ ಸಿದ್ಧಾಂತವೂ ಹೌದು. ತೊಂಬತ್ತೂರು ವರ್ಷಗಳ ಸಾರ್ಥಕ ಬದುಕಿನಲ್ಲಿ ಕಣವಿಯವರು ತಮ್ಮ ನಿರಾಡಂಬರ ವ್ಯಕ್ತಿತ್ವದಿಂದ ಕನ್ನಡ ಮನಸ್ಸುಗಳಲ್ಲಿ ಪ್ರೀತಿ ಗೌರವಗಳ ಸ್ಥಾನ ಪಡೆದುಕೊಂಡಿದ್ದಾರೆ. ಎಲ್ಲರೊಡನೆ ಸಹಜವಾಗಿ ಬೆರೆಯುತ್ತಿದ್ದ ಅವರು ಸ್ನೇಹಜೀವಿಯಾಗಿದ್ದರು. ಅವರೊಡನೆ ಮಾತನಾಡುವಾಗ ಆಪ್ತಭಾವದ ವಾತಾವರಣ ರೂಪುಗೊಳ್ಳುತ್ತಿತ್ತು. ಅವರ ಸಜ್ಜನಿಕೆ ತೋರಿಕೆಯದಾಗಿರಲಿಲ್ಲ; 'ಒಳ್ಳೆಯತನ ಸಹಜವೇನಲ್ಲ'; ಕಣವಿಯವರು ಒಳ್ಳೆಯತನವನ್ನು ಎಚ್ಚರದಿಂದ ತಮ್ಮ ವ್ಯಕ್ತಿತ್ವದಲ್ಲಿ ಸಹಜವೆಂಬಂತೆ ಸಾಧಿಸಿದ್ದರು. ಅವರ ಜೊತೆಗಿನ ಸಂವಾದದಲ್ಲಿ ವಿದ್ವತ್ತಿಗಿಂತ ಅನುಭವವೇ ಪ್ರಧಾನವಾಗಿರುತ್ತಿತ್ತು. ಅಕೆಡೆಮಿಕ್ ಪರಿಭಾಷೆಯಿಂದ ಅವರು ದೂರವಿದ್ದರು. ಅಧಿಕಾರಯುತವಾಗಿ ಮಾತನಾಡುವ 'ಪ್ರಭುಸಂಮಿತ'ಕ್ಕಿಂತ, ಸಹಜೀವಿಯಾಗಿ ಸಂವಾದಿಸುವ 'ಮಿತ್ರಸಂಮಿತ' ಅವರ ಧಾಟಿಯಾಗಿತ್ತು.

ಒಮ್ಮೆ ನನ್ನೊಡನೆ ಮಾತನಾಡುತ್ತ ಕಣವಿಯವರು ಹೇಳಿದ ಮಾತುಗಳು ನೆನಪಾಗುತ್ತಿವೆ: 'ಈಗ ಸೃಜನಶೀಲ ಮನಸ್ಸು ಅನೇಕ ಆತಂಕಗಳ ನಡುವೆ ಕ್ರಿಯಾಶೀಲವಾಗಬೇಕಿದೆ. ಎಲ್ಲ ಕಡೆ ಒಂದು ಬಗೆಯ ಗೊಂದಲದ ವಾತಾವರಣವಿದೆ. ಸರಳತೆ, ನಿರಾಡಂಬರತೆ ಮಾಯವಾಗಿ ತೋರಿಕೆ, ಆಡಂಬರ ಎಲ್ಲ ರಂಗಗಳನ್ನೂ ಆವರಿಸಿದೆ. ಕಾಣ್ಕೆ ಕಣ್ಕಟ್ಟುಗಳ ನಡುವೆ ಅಂತರ ಇಲ್ಲವಾಗಿದೆ. ಮನುಷ್ಯ ಸಂಬಂಧಗಳ ಬಗೆಗಿನ ಮೂಲ ನಂಬಿಕೆಯನ್ನೇ ಅಲುಗಾಡಿಸುವಂತಹ ಘಟನೆಗಳು ನಡೆಯುತ್ತಿವೆ. ವ್ಯಕ್ತಿ–ವ್ಯಕ್ತಿಗಳ ನಡುವೆ ಮಾತ್ರವಲ್ಲ, ಸಂವೇದನಾಶೀಲ ಮನಸ್ಸು ಹಾಗೂ ಸಮಾಜದ ನಡುವೆಯೂ ಸಂವಾದ ಸಾಧ್ಯವಾಗದ ಸ್ಥಿತಿಯಲ್ಲಿ ನಾವಿದ್ದೇವೆ. ಈ ಎಲ್ಲ ಸವಾಲುಗಳನ್ನೂ ಲೇಖಕ ಇಂದು ಎದುರಿಸಬೇಕಿದೆ.'